ಇ) ಸಹಾಯಕ ಶಸ್ತ್ರ ಚಿಕಿತ್ಸಕರು ೮-೩-೧೯೯೦
ಮತ್ತು ಕ್ಲರ್ಕ್ ಕಂ ಟೈಪಿಸ್ಟ್ ೧೯-೩-೧೯೯೦.

ಈ) ಸಹಾಯಕ ಶಸ್ತ್ರ ಚಿಕಿತ್ಸಕರು — ೧೦ಜ
ಕ್ಲರ್ಕ್ ಕಂ ಟೈಪಿಸ್ಟ್ ೧೭ಜ

ಉ) ಇಲ್ಲ

ಕೋಲಾರ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿಗಾಗಿ ತೀವ್ರ ಅಭಾವವಿರುವುದು

೨೬೦. ಶ್ರೀ ಚೌಡರೆಡ್ಡಿ, (ಚಿಂತಾಮಣಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೯-೯೦ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿಗಾಗಿ ತೀವ್ರ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಕುಡಿಯುವ ನೀರಿಗೆ ತೀವ್ರ ಅಭಾವವಿರುವ ಗ್ರಾಮಗಳು ಯಾವುವು (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)

ಇ) ಎಷ್ಟು ಗ್ರಾಮಗಳಲ್ಲಿ ಕೊಳವೆ ಬಾವಿಗಳು ಒಣಗಿ ಹೋಗಿರುತ್ತವೆ (ತಾಲ್ಲೂಕುವಾರು ವಿವರವನ್ನು ಒದಗಿಸುವುದು)

ಈ) ಕುಡಿಯುವ ನೀರಿಗೆ ತೀವ್ರ ಅಭಾವವಿರುವ ಗ್ರಾಮಗಳಿಗೆ ನೀರು ಸರಬರಾಜು ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಮಂತ್ರಿಗಳು).—

ಅ) ಬಂದಿರುತ್ತದೆ.

ಆ) ಕುಡಿಯುವ ನೀರಿಗೆ ತೀವ್ರ ಅಭಾವವಿರುವ ಗ್ರಾಮಗಳ ತಾಲ್ಲೂಕುವಾರು ಪಟ್ಟಿಯನ್ನು ಲಗತ್ತಿಸಲಾಗಿದೆ.

ಇ) ಕೋಲಾರ ಜಿಲ್ಲೆಯಲ್ಲಿ ಒಟ್ಟು ೨೮೮ ಕೊಳವೆ ಬಾವಿಗಳು ಒಣಗಿ ಹೋಗಿರುತ್ತವೆ. ತಾಲ್ಲೂಕುವಾರು ಪಟ್ಟಿಯನ್ನು ಪ್ರತ್ಯೇಕವಾಗಿ ಒದಗಿಸಲಾಗಿದೆ.

ಈ) ಜಿಲ್ಲೆಯ ಕುಡಿಯುವ ನೀರಿನ ಅಭಾವ ಪರಿಹಾರಕ್ಕಾಗಿ ಸರ್ಕಾರವು ೨೫ ಲಕ್ಷ ರೂಗಳನ್ನು ಒದಗಿಸಿರುತ್ತದೆ. ಮತ್ತು ಜಿಲ್ಲಾ ಪರಿಷತ್ ವತಿಯಿಂದ ರೂ ೧೦ ಲಕ್ಷ ರೂ ಗಳನ್ನು ಒದಗಿಸಿರುತ್ತದೆ. ಈ ಗ್ರಾಮಗಳಲ್ಲಿ ಕೊಳವೆ ಬಾವಿಗಳನ್ನು ತೋಡುವ ಕಾರ್ಯವನ್ನು ಈಗಾಗಲೇ ತೆಗೆದುಕೊಳ್ಳಲಾಗಿದೆ.

ಸ್ಟೇಟ್‌ಮೆಂಟ್—೧

ಮುಂಬರುವ ಬೇಸಿಗೆಯಲ್ಲಿ ಕುಡಿಯುವ ನೀರಿಗೆ ತೊಂದರೆ ಉಂಟಾಗಬಹುದಾದ ಗ್ರಾಮಗಳ ಪಟ್ಟಿ

ಕ್ರಮ ಸಂಖ್ಯೆ	ತಾಲ್ಲೂಕು	ತೊಂದರೆಗೆ ಒಳಗಾಗುವ ಗ್ರಾಮಗಳ ಸಂಖ್ಯೆ
೧	ಬಂಗಾರಪೇಟೆ	೭೫
೨	ಕೋಲಾರ	೩೯
೩	ಮಾಲೂರು	೨೮
೪	ಮುಳಬಾಗಲು	೫೨
೫	ಶ್ರೀನಿವಾಸಪುರ	೩೫
೬	ಚಿಕ್ಕಬಳ್ಳಾಪುರ	೮೯
೭	ಬಾಗೇಪಲ್ಲಿ	೬೮
೮	ಚಿಂತಾಮಣಿ	೧೦೯
೯	ಗೌರಿಬಿದನೂರು	೬೨
೧೦	ಶಿಡ್ಲಘಟ್ಟ	೯೨
೧೧	ಗುಡಿಬಂಡೆ	೨೨
	ಒಟ್ಟು	೬೭೧

ಸ್ಟೇಟ್‌ಮೆಂಟ್—೨

ಒಣಗಿ ಹೋಗಿರುವ ಕೊಳವೆ ಬಾವಿಗಳ ವಿವರ

ಕ್ರಮಸಂಖ್ಯೆ	ತಾಲ್ಲೂಕು	ಒಣಗಿ ಹೋಗಿರುವ ಕೊಳವೆ ಬಾವಿಗಳ ಸಂಖ್ಯೆ
೧	ಬಂಗಾರಪೇಟೆ	೩೫
೨	ಕೋಲಾರ	೨೧
೩	ಮಾಲೂರು	೧೮
೪	ಮುಳಬಾಗಿಲು	೨೫
೫	ಶ್ರೀನಿವಾಸಪುರ	೨೦
೬	ಚಿಕ್ಕಬಳ್ಳಾಪುರ	೪೪
೭	ಬಾಗೇಪಲ್ಲಿ	೨೫
೮	ಚಿಂತಾಮಣಿ	೩೨
೯	ಗೌರಿಬಿದನೂರು	೧೮
೧೦	ಶಿಡ್ಲಘಟ್ಟ	೩೦
೧೧	ಗುಡಿಬಂಡೆ	೨೧
	ಒಟ್ಟು	೨೮೮

ಉಪಾಧ್ಯಕ್ಷಣಿಯವರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ವರದಿಗಳನ್ನು ಒಪ್ಪಿಸುವುದು

ಶ್ರೀ ಹೆಚ್. ಏಕಾಂತಯ್ಯ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ).—ಸನ್ಮಾನ್ಯ ಅಧ್ಯಕ್ಷಣಿಯವರೆ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ೪೭, ೪೮, ೪೯ ಮತ್ತು ೫೦ನೇ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ಸರ್ಕಾರಿ ನೌಕರರ ಸಾಮೂಹಿಕ ರಾಜೀನಾಮೆ ಕುರಿತು

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸನ್ಮಾನ್ಯ ಅಧ್ಯಕ್ಷಣಿಯವರೆ, ಒಂದು ಮಹತ್ವದ ವಿಚಾರವನ್ನು ನಾನು ಈ ಸಭೆಯಲ್ಲಿ ಮತ್ತು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ, ನಾನು, ನಮ್ಮನಾಯಕರಾದ ಚಂದ್ರೇಗೌಡರು, ಏಕಾಂತಯ್ಯನವರು, ದೇಶಪಾಂಡೆಯವರು ಎಲ್ಲರೂ ಸೇರಿ ಒಂದು ನಿಲುವಳಿ ಸೂಚನೆಯನ್ನು ಈ ಸದನದಲ್ಲಿ ತೆಗೆದುಕೊಳ್ಳಬೇಕೆಂದು ಪ್ರಸ್ತಾಪ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ನಾನೂ ಸಹ ಒಂದು ಪತ್ರ ಬರೆದಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ವಾಟಾಳ್ ನಾಗರಾಜ್‌ರವರು ಅದಕ್ಕೆ ಸಹಿ ಹಾಕಿದ್ದಾರೆ. ಈಗ ಏನಾಗಿದೆ ಅಂದರೆ, ಕಳೆದ ೮-೧೦ ದಿವಸಗಳಿಂದ ಸರ್ಕಾರದ ಎಲ್ಲಾ ಕಛೇರಿಗಳ ಕೆಲಸಗಳು ಸಹಿತ ಇಡೀ ರಾಜ್ಯದಲ್ಲಿ ಸ್ಥಗಿತವಾಗಿವೆ. ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಒಂದು ಹೇಳಿಕೆಯನ್ನು ನೀಡಿದರು ಈ ಬಗ್ಗೆ ವಾರ್ತಾ ಸಚಿವರು ಸಹಿತ ಪತ್ರಿಕೆಗಳಿಗೆ ಹೇಳಿಕೆ ನೀಡಿದರು. ನಾವು ಜೂನ್ ೧ನೇ ತಾರೀಖಿನಿಂದ ಯಾವುದೇ ಒಂದು ಪರ್ಯಾವಣೆಯನ್ನು ಯಾವುದೇ ಇಲಾಖೆಯಲ್ಲೂ ಮಾಡುವುದಿಲ್ಲ, ಅದರಿಂದಾಚೆಗೆ ನಾವು ನಿಲ್ಲಿಸುತ್ತೇವೆ ಎನ್ನುವ ಮಾತನ್ನು ಹೇಳಿದರು. ಯಾವ ಯಾವ ಜಾಗಕ್ಕೆ ಯಾರು ಯಾರು ಹಾಕಿಸಿಕೊಳ್ಳಬೇಕು, ಎಲ್ಲೆಲ್ಲಿಗೆ ಹಾಕಿಸಿಕೊಳ್ಳಬೇಕು, ಏನೇನು ಮಾಡಬೇಕು ಎಂಬ ಬಗ್ಗೆ ೧೫ನೇ ತಾರೀಖಿನಿಂದ ಪ್ರಾರಂಭವಾಗಿ ೧ನೇ ತಾರೀಖಿನವರೆಗೆ